**CC 1115/2021**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ**
**ನ್ಯಾಯಾಲಯ, ಹೊಸಪೇಟೆ.**
**ಸಿಸಿ ನಂಬರ್** 1115/2021

**ಸಿ ಡಬ್ಲೂ - 1**
**ಪಿ ಡಬ್ಲೂ - 1**

| | |
|---|---|
| **ಸಾಕ್ಷಿಯ ಹೆಸರು -** | **ಮುಬೀನ ತಾಜ್** |
| **ಗಂಡನ ಹೆಸರು -** | **ಶಬ್ಬೀರ ಪಾಷಾ** |
| **ವಯಸ್ಸು -** | 30 **ವರ್ಷಗಳು** |
| **ಉದ್ಯೋಗ -** | **ಟೇಲರಿಂಗ್ ಕೆಲಸ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ** 22-08-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನನ್ನ ಮತ್ತು ಆರೋಪಿಯ ಮದುವೆ **2020** ರಲ್ಲಿ ಹೊಸಪೇಟೆಯಲ್ಲಿ ನಮ್ಮ ಹಿರಿಯರ ಸಮಕ್ಷಮ ಆಗಿರುತ್ತದೆ. ಆರೋಪಿಗೆ ನನ್ನನ್ನು ಮದುವೆಯಾಗುವುದಕ್ಕೂ ಮೊದಲೇ ಇನ್ನೊಂದು ಮದುವೆಯಾಗಿ ಇಬ್ಬರು ಮಕ್ಕಳು ಇದ್ದರು. ಆದರೂ ಸಹ, ನನ್ನನ್ನು ಮದುವೆಯಾಗುವುದಾಗಿ ಆರೋಪಿ ನನ್ನ ತಾಯಿಗೆ ಕೇಳಿಕೊಂಡಾಗ ನಾವುಗಳು ಒಪ್ಪಿದ ನಂತರ ನನ್ನ ಮದುವೆ ಆರೋಪಿಯೊಂದಿಗೆ ಆಗಿರುತ್ತದೆ. ಆರೋಪಿಯ ಮೊದಲನೇ ಹೆಂಡತಿ ತೀರಿಕೊಂಡಿದ್ದರಿಂದ ಆತ ನನ್ನನ್ನು ಮದುವೆಯಾಗಿದ್ದ.

ನಾನು **2021** ರಲ್ಲಿ **3** ತಿಂಗಳ ಗರ್ಭಿಣಿ ಇದ್ದೆ. ಆರೋಪಿ ನನಗೆ ಹೆಣ್ಣು ಮಗು ಆಗುತ್ತಿದೆ ಎಂದು ಹೇಳಿ, ಮಗು ಆಗುವುದು ಬೇಡ ಎಂದು ನನ್ನ ಗರ್ಭಪಾತ ಆಗಲಿ ಎಂಬ ಉದ್ದೇಶದಿಂದ ನನಗೆ ಔಷಧಿ ಕೊಟ್ಟಿದ್ದ. ನಾನು ಔಷಧಿ ತೆಗೆದುಕೊಂಡು ನಿತ್ರಾಣಗೊಂಡಾಗ ನನ್ನ ಅಣ್ಣಂದಿರಾದ ಚಾಸಾ **-6** ಮತ್ತು ತೌಸೀಫ್ ರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಾನು

ಹೊಸಪೇಟೆಯ ಸರ್ಕಾರಿ ಆಸ್ಪತ್ರೆಯಲ್ಲಿ 5 ದಿನಗಳ ಕಾಲ ದಾಖಲಾಗಿ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಗರ್ಭ ಚೀಲದಲ್ಲಿ ಬ್ರೂಣ ಮೃತ ಪಟ್ಟು ಹಾಗೆಯೇ ಇದ್ದದ್ದರಿಂದ ಶ್ರೀಪತಿ ಆಸ್ಪತ್ರೆಯಲ್ಲಿ ನನ್ನನ್ನು ದಾಖಲು ಮಾಡಿ ಅದನ್ನು ನನ್ನ ತವರು ಮನೆಯವರು ತೆಗೆಸಿರುತ್ತಾರೆ. ಆರೋಪಿ ಭ್ರೂಣ ಹತ್ಯೆಗಾಗಿ ಔಷಧಿ ಕೊಟ್ಟು ಆಸ್ಪತ್ರೆಗೆ ಬಿಟ್ಟ ನಂತರ ಇಲ್ಲಿಯವರೆಗೂ ನೋಡಲು ಮತ್ತು ಕರೆದುಕೊಂಡು ಹೋಗಲು ಬಂದಿರುವುದಿಲ್ಲ. ಆರೋಪಿ ಇನ್ನೊಂದು ಮದುವೆಯನ್ನು ಮಾಡಿಕೊಂಡಿರುತ್ತಾರೆ. ನನ್ನ ಮಾವ, ಅತ್ತೆ, ಬಾವಂದಿರಾದ ಯೂನಿಸ್ ಪಾಷಾ ಮತ್ತು ಆಲಂ ಪಾಷಾ ರವರು ನನಗೆ ಹೊಡೆ ಬಡೆ ಮಾಡಿ ಕಿರುಕುಳ ನೀಡಿರುತ್ತಾರೆ. ನನ್ನ ಅತ್ತೆ ನಾನು ಆರೋಪಿಯನ್ನು ಬಿಡಬೇಕು ಮತ್ತು ಆತನಿಗೆ ಇನ್ನೊಂದು ಮದುವೆ ಮಾಡುತ್ತೇವೆ ಎಂದು ಹೆದರಿಸಿರುತ್ತಾರೆ. ನನ್ನ ದೊಡ್ಡ ನಾದಿನಿ ಸಾಹೇರಾ ಭಾನು ರವರು ಸಹ ಆರೋಪಿಗೆ ಇನ್ನೊಂದು ಮದುವೆ ಮಾಡುತ್ತೇವೆ ಎಂದು ಹೆದರಿಸಿರುತ್ತಾರೆ. ಆರೋಪಿ ನನಗೆ ಹೊಡೆ ಬಡೆ ಮಾಡಿ ನನಗೆ ಸೇರಿದ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಊರು ಬಿಟ್ಟು ಹೋದಾಗ ನಾನು ಪ್ರಕರಣ ದಾಖಲಿಸಿರುತ್ತೇನೆ. ನಾನು ಈ ಬಗ್ಗೆ ಖಾಸಗಿ ದೂರನ್ನು ನೀಡಿರುತ್ತೇನೆ. ದೂರು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 1 (ಎ) ಎಂದು ಗುರುತಿಸಲಾಯಿತು.

ಪೋಲಿಸರು ನನ್ನ ಸಮಕ್ಷಮ ನನ್ನ ಗಂಡನ ಮನೆಯ ಬಳಿ ಮತ್ತು ನನ್ನ ತಾಯಿಯ ಮನೆಯ ಬಳಿ ಎರಡು ಪಂಚನಾಮೆಗಳನ್ನು ಮಾಡಿರುತ್ತಾರೆ. ಸಾಕ್ಷಿ ಎರಡು ಪಂಚನಾಮೆಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಗಳನ್ನು ನಿಪಿಃ 2 ಮತ್ತು 3 ಎಂದು ಗುರುತಿಸಲಾಯಿತು.

**ಸಿ ಡಬ್ಲೂ - 1**
**ಪಿ ಡಬ್ಲೂ - 1**

ಸಾಕ್ಷಿ **8-** ಪೋಟೋ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿಃ **4** ಎಂದು ಗುರುತಿಸಲಾಯಿತು. ನಿಪಿಃ **4** ರಲ್ಲಿರುವ ಮನೆ ನನ್ನ ತಾಯಿಯ ಮನೆಯಾಗಿರುತ್ತದೆ.

ಈಗ ನಾನು ನೋಡುತ್ತಿರುವ ವಿವಾಹ ಆಮಂತ್ರಣ ಪತ್ರಿಕೆ ನನ್ನ ಮತ್ತು ಆರೋಪಿಯ ವಿವಾಹ ಆಮಂತ್ರಣ ಪತ್ರಿಕೆ ಆಗಿರುತ್ತದೆ. ಸಾಕ್ಷಿ ವಿವಾಹ ಆಮಂತ್ರಣ ಪತ್ರಿಕೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **5** ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ ಪೋಟೋಗಳು ಮದುವೆ ಸಮಯಕ್ಷ್ಕ ತೆಗೆದ ಪೋಟೋಗಳಾಗಿರುತ್ತವೆ. ಸಾಕ್ಷಿ **5-** ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿಃ **6** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ವಾಯ್., ವಕೀಲರಿಂದ</u>**

ನಾನು ಆರೋಪಿಯನ್ನು ಮದುವೆಯಾಗುವುದಕ್ಕೂ ಮೊದಲು ನನಗೆ ಇನ್ನೊಂದು ಮದುವೆ ಆಗಿ ವಿಚ್ಛೇಧನ ಅಗಿತ್ತು ಅಂದರೆ ಸರಿ. ನಾನು ನನ್ನ ಮೊದಲನೆ ಗಂಡನ ವಿರುದ್ದ ಹೊಸಪೇಟೆ ಪಟ್ಟಣ ಪೋಲಿಸ ಠಾಣೆಯಲ್ಲಿ ವರದಕ್ಷಿಣೆ ಕಿರುಕುಳ ಪ್ರಕರಣ ದಾಖಲಿಸಿದ್ದೆ ಅಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ಮೊದಲನೆ ಗಂಡನಿಂದ ಪರಿಹಾರ ಪಡೆದು ರಾಜಿ ಮಾಡಿಕೊಂಡಿದ್ದೆ ಅಂದರೆ ಸರಿ.

ಆರೋಪಿಯ ಸ್ವಂತ ಊರು ಲಿಂಗಸೂರು ತಾಲ್ಲೂಕಿನ ಗೆಜ್ಜಲಘಟ್ಟ ಗ್ರಾಮ ಅಂದರೆ ಸರಿ. ಆರೋಪಿ ಹೊಸಪೇಟೆಯಲ್ಲಿ ಔಷಧಿ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದ ಅಂದರೆ ಸರಿ.

ಆರೋಪಿ ಮತ್ತು ನಾನು ಮಾತ್ರ ಹೊಸಪೇಟೆಯ ಮನೆಯಲ್ಲಿ ವಾಸವಿದ್ದೇವು ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅತ್ತೆ ಮಾವ ಇದ್ದರು ಎಂದು ನುಡಿಯುತ್ತಾರೆ.

ಹೊಸಪೇಟೆಯ ಮನೆಯಲ್ಲಿ ಯೂನೂಸ್ ಭಾಷಾ ಮತ್ತು ಆಲಂ ಭಾಷಾ ನಮ್ಮೊಂದಿಗೆ ವಾಸವಿರಲಿಲ್ಲ ಅಂದರೆ ಸರಿ. ಸಾಮಾನ್ಯವಾಗಿ ಮದುವೆಯಾದ ನಂತರ ಅನಾರೋಗ್ಯದ ಕಾರಣಗಳಿಂದ ಗರ್ಭಪಾತಗಳು ಆಗುತ್ತವೆ ಅಂದರೆ ಸರಿಯಲ್ಲ. ನಾನು ವೈದ್ಯರ ಮುಂದೆ ಆರೋಪಿ ಕಿರುಕುಳ ನೀಡಿದ ಅಥವಾ ಗರ್ಭಪಾತ ಮಾಡಿಸಲು ಔಷಧಿ ನೀಡಿಸಿದ್ದ ಎಂದು ಹೇಳಿಕೆ ನೀಡಿರಲಿಲ್ಲ. ನನಗೆ ಆರೋಪಿ ಯಾವತ್ತೂ ಹೊಡೆಬಡೆ ಮಾಡಿಲ್ಲ, ಗರ್ಭಪಾತ ಮಾಡಲು ಔಷಧಿ ಕೊಟ್ಟಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ನಾನು ಶ್ರೀಪತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಯನ್ನು ನೀಡಿರುವುದಿಲ್ಲ. ನನಗೆ ಅನಾರೋಗ್ಯ ಕಾರಣಗಳಿಂದ ಗರ್ಭಪಾತವಾಗಿದ್ದು, ಆರೋಪಿ ಯಾವುದೇ ಔಷಧಿಯನ್ನು ನೀಡಿರಲಿಲ್ಲ ಅಂದರೆ ಸರಿಯಲ್ಲ. ನಾನು ನನ್ನ ಮತ್ತು ಆರೋಪಿಯ ಮಧ್ಯೆದ ವ್ಯಾಜ್ಯ ಬಗೆಹರಿಸಿಕೊಳಳಲು ಜಮಾತ್ ರವರಿಗೆ ಅರ್ಜಿ ನೀಡಿರುವುದಿಲ್ಲ.

ನಾನು ನ್ಯಾಯಾಲಯದಲ್ಲಿ ಖಾಸಗಿ ದೂರು ಸಲ್ಲಿಸುವುದಕ್ಕೂ ಮೊದಲು ಪೋಲಿಸ ಠಾಣೆಯಲ್ಲಿ ದೂರು ನೀಡಿದ್ದೆ. ಸಾಕ್ಷಿ ಮುಂದುವರೆದು ಪೋಲಿಸರು ಆರೋಪಿ ಬರುತ್ತಾರೆ, ಬಗೆಹರಿಸೋಣ ಎಂದು ಯಾವುದೇ ಕ್ರಮ ಕೈಗೊಳ್ಳದಿದ್ದ ಕಾರಣ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಗಂಡನ ಔಷಧಿ ಅಂಗಡಿ ಸರಿಯಾಗಿ ನಡೆಯದೇ ಆತ ಸಾಕಷ್ಟು ಸಾಲ ಮಾಡಿಕೊಂಡಿದ್ದ ಅಂದರೆ ಸರಿಯಲ್ಲ.

**ಸಿ ಡಬ್ಲೂ - 1**
**ಪಿ ಡಬ್ಲೂ - 1**

ಈಗ ನನ್ನ ಗಂಡನ ಔಷಧಿ ಅಂಗಡಿ ಇರುವುದಿಲ್ಲ ಅಂದರೆ ಸರಿ. ಆರೋಪಿಯ ವ್ಯವಹಾರಗಳಲ್ಲಿ ನಷ್ಟ ಆಗಿದ್ದರಿಂದ ನಾನು ಆತನೊಂದಿಗೆ ಇರಲು ಇಚ್ಚಿಸದೇ ಆತನನ್ನು ದೂರ ಇಡುವ ಉದ್ದೇಶದಿಂದ ಆತನ ವಿರುದ್ದ ಸುಳ್ಳು ದೂರು ನೀಡಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿಯನ್ನು ಹೆದರಿಸಿ ಆತನಿಂದ ಪರಿಹಾರ ಪಡೆಯಬೇಕು ಎಂಬ ಉದ್ದೇಶದಿಂದ ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಪೋಲಿಸರು ನನ್ನ ತಾಯಿಯ ಮನೆಯ ಹತ್ತಿರವಾಗಲಿ, ನನ್ನ ಗಂಡನ ಮನೆಯ ಹತ್ತಿರವಾಗಲಿ ಬಂದಿರಲಿಲ್ಲ ಮತ್ತು ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಗಂಡ ನನ್ನನ್ನು ಈಗಲೂ ಕರೆದುಕೊಂಡು ಹೋಗಲು ತಯಾರಿದ್ದರೂ ನಾನು ಹೋಗಲು ತಯಾರಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಈಗಲೂ ಹೋಗಲು ತಯಾರಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೋಗಲು ತಯಾರಿರದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.